# 13

# ಉಪವಾಸ ಮಾಡುವುದು, 2

ಉಪವಾಸ ಮಾಡುವದನ್ನು ಬೈಬಲು ಬೋಧಿಸುತ್ತದೆ. ಅದು ಅತಿ ಚಿಕ್ಕದಾದ ಅಡಿಟಿಪ್ಪಣೆಯಾಗಿರುವದಿಲ್ಲ; ಅದು ನಂಬಿಕೆಯ ಆಳವಾದ ಹೇಳಿಕೆಯಾಗಿದೆ. ಉಪ ವಾಸ ಮಾಡುವುದು ಕನಿಷ್ಠಪಕ್ಷ 78 ಸಲ ಪರಿಶುದ್ಧ ಬರಹಗಳಲ್ಲಿ ಕಂಡುಬರುತ್ತದೆ. ಮೂವತ್ತಕ್ಕಿಂತ ಹೆಚ್ಚು ಹೊಸ ಒಡಂಬಡಿಕೆಯಲ್ಲಿ ಇರುವದರಿಂದ, ಉಪವಾಸವನ್ನು ಕೇವಲ ಹಳೇ ಒಡಂಬಡಿಕೆಯ ಆಚರಣೆ ಎಂದು ಕಡೆಗಣಿಸಲ್ಪಡಲಾಗುವದಿಲ್ಲ. ನಾಲ್ವತ್ತು ದಿನ ಉಪವಾಸ ಮಾಡಿದ ಮೂರು ಜನರು - ಯೇಸು, ಮೋಶೆ ಮತ್ತು ಎಲೀಯರು - ಎಲ್ಲರೂ ಒಂದಾಗಿ ರೂಪಾಂತರ ಬೆಟ್ಟದ ಮೇಲೆ ಇರುವದನ್ನು ಗಮನಿಸಬೇಕು. ದಾಖಲೆಯಾದ ಮೊದಲನೆಯ ಉಪವಾಸವು ಮೋಶೆಯೊಂದಿಗೆ ಬಂದಿತು. ದಾವೀದ, ನೆಹೆಮೀಯ, ದಾನಿಯೇಲ, ಯೆಹೂದ್ಯರು, ಸ್ನಾನಿಕನಾದ ಯೋಹಾನ, ಯೇಸು ಮತ್ತು ಪೌಲ ಉಪವಾಸ ಮಾಡಿದರು. ಅಷ್ಟು ಆತ್ಮೀಕವಾಗಿ ಮಹತ್ವವುಳ್ಳದ್ದು ಇಂದು ಹೇಗೆ ಕಡೆಗಣಿಸಲ್ಪಡಬಹುದು?

ಉಪವಾಸ ಮಾಡುವುದು ಆಚರಣೆಯಲ್ಲಿ ಆತ್ಮ ಸಂಯಮನವಾಗಿದೆ. ಮನಸ್ಸಿಗೆ ಬಂದಂತೆ ಮಾಡುವುದನ್ನು ನಾವು ಬೆಳಿಸಿಕೊಳ್ಳುತ್ತೇವೆ. ಶಿಸ್ತು, ಅಲ್ಲಗಳೆಯುವಿಕೆ, ತ್ಯಾಗ, ಮತ್ತು ಶ್ರಮೆಯು ಆಧುನಿಕ ಮನಃ ಸ್ಥಿತಿಗೆ ವಿರುದ್ಧವಾಗಿರುತ್ತದೆ. ಉಪವಾಸ ಮಾಡುವುದು ಸಾಮಾನ್ಯವಾಗಿ ಆಹಾರದ ಹಿನ್ನಲೆಯಲ್ಲಿದೆ. ಉಪವಾಸ ಮಾಡುವದರಲ್ಲಿ ಒಬ್ಬನು ಎದೆನಿನಲ್ಲಿಯ ಪ್ರಥಮ ಹಕ್ಕನ್ನು - ತಿನ್ನುವದನ್ನು ಬಿಟ್ಟುಕೊಡುತ್ತಾನೆ. ಉಪವಾಸ ಮಾಡುವುದು ಮದುವೆಯಲ್ಲಿ ಒಂದು ಪ್ರಾಧಾನ್ಯತೆಯಾಗಬಹುದು (1 ಕೊರಿಂಥ 7). ದೇವದೊತರೊಂದಿಗೆ ತನ್ನ ಸಂಬಂಧದೊಂದಿಗೆ ಇಸಾಕನೂ ಸಹ ಅಡ್ಡ ಬರಲಾರನು ಎಂಬುದನ್ನು ಅಬ್ರಹಾಮನು ಕಲಿತುಕೊಳ್ಳಬೇಕಾಗಿತ್ತು (ಆದಿಕಾಂಡ 22). ಉಪವಾಸವು ಈ ನಿಕಟ ಅನ್ಯೋನ್ಯತೆಯೊಂದಿಗೆ ಅಡ್ಡ ಬರುವ ಯಾವದೇ ಸಂಗತಿಯ ಅಲ್ಲಗಳೆಯುವಿಕೆಯಾಗಿದೆ. ನಿನಗೂ ಮತ್ತು ದೇವರಿಗೂ ಮಧ್ಯದಲ್ಲಿ ಯಾವುದು ನಿಲ್ಲುತ್ತದೆ? ಇಂದು ನಮ್ಮ ಜಗತ್ತಿನ ತೊಂದರೆಯು *ಇರುವುದು* ಅಲ್ಲ - ಅದು *ಇರುವದಕ್ಕಾಗಿ ಇರುವುದಾಗಿದೆ.*

ಮೋಶೆಯ ಧರ್ಮಶಾಸ್ತ್ರವು ಒಂದೇ ಒಂದು ಉಪವಾಸವನ್ನು, ... ಉಪವಾಸದ ಒಂದು ದಿನವನ್ನು ... ಸರ್ವದೋಷಪರಿಹಾರಕ ದಿನವನ್ನು ಆಜ್ಞಾಪಿಸಿತು (ಯಾಜಕಕಾಂಡ 23:26-32; ಅರಣ್ಯಕಾಂಡ 29:7-11). ವಿಧೇಯರಾಗದವರು ಬಹಿಷ್ಕರಿಸಲ್ಪಡಬೇಕಾ ಗಿತ್ತು. ಇದೇ ಮನೋಭಾವನೆಯಲ್ಲಿ, ಯೆಹೂದ್ಯರು ಜೀವನದಿಂದ ಹೊರಗೆ ಹೋಗಿ ಪ್ರತೀ ವರ್ಷ ಒಂದು ವಾರ ಡೇರೆಗಳಲ್ಲಿ ವಾಸಿಸ ಬೇಕಾಗಿತ್ತು. ತಮ್ಮ ಹೊರಡೋಣದ ಸಮಯವನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಇಸ್ರಾಯೇಲ್ಯರು ಅರಸ ಸೌಲನ ಮರಣಕ್ಕಾಗಿ ಒಂದು ವಾರ ಶೋಕಾಚರಣೆಯಲ್ಲಿ ಉಪವಾಸ ಮಾಡಿದರು (1 ಸಮುವೇಲ 31:13). ಇಸ್ರಾಯೇಲನ್ನು ರಕ್ಷಿಸುವದಕ್ಕಾಗಿ ಎಸ್ತೇರಳು ಉಪವಾಸ ಮಾಡಿದಳು. ಒಂದು ವಿನಾಶಕರ ದರ್ಶನವನ್ನೊಳಗೊಂಡು ದಾನಿಯೇಲನಿಗೆ ವಿಲಕ್ಷಣವಾದ ಉಪವಾಸವಿತ್ತು. ಅನ್ನಳು ಉಪವಾಸ ಮಾಡುವದಕ್ಕಾಗಿ ತನ್ನ ವಯಸ್ಸಾದ ಜೀವಿತವನ್ನು ಕೊಟ್ಟಳು (ಲೂಕ 2:36-38). ಮೊದಲನೆಯ ಮಿಶನ್ ಕಾರ್ಯವು ಉಪವಾಸದೊಳಗಿಂದ

ಬಂದಿತು (ಅಪೊಸ್ತಲರ ಕೃತ್ಯಗಳು 13:1-3). ಉಪವಾಸ ಮಾಡುವದರೊಂದಿಗೆ ಹಿರಿಯರು ಪ್ರತಿಷ್ಠಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 14:23). ಕೊರ್ನೇಲಿಯಸನು, ಮೊದಲನೆಯ ಮಾರ್ಪಾಟ ಹೊಂದಿದ ಅನ್ಯನು, ಉಪವಾಸ ಮಾಡಿದನು (ಅಪೊಸ್ತಲರ ಕೃತ್ಯಗಳು 10). ಪೌಲನು ಬಹಳ ಸಲ ಉಪವಾಸ ಮಾಡಿದನು (2 ಕೊರಿಂಥ 6:5; 11:27).

ಪರಿಶುದ್ಧ ಬರಹಗಳಲ್ಲಿ ಉಪವಾಸ ಮಾಡುವುದು ದುರುಪಯೋಗಪಡಿಸಲ್ಪಟ್ಟಿದೆ. ಯೆಶಾಯ 58ನ್ನು ಓದಿರಿ ಮತ್ತು ಅಧ್ಯಯನ ಮಾಡಿರಿ. ಉಪವಾಸ ಮಾಡುವದರಲ್ಲಿ "ಒಳ್ಳೆಯದರ ಮತ್ತು ದುಷ್ಟತ್ವದ" ಬಗ್ಗೆ ದೇವರು ಬೋಧಿಸಿದನು. ನಾವು ಉಪವಾಸ ಮಾಡಬೇಕೆಂದು ದೇವರು ನಿರೀಕ್ಷಿಸಿದನೆಂದು ತೋರುತ್ತದೆ. "ನೀವು ಉಪವಾಸ *ಮಾಡಿದರೆ*" ಎಂದು ಆತನು ಹೇಳಲಿಲ್ಲ, ಆದರೆ "ನೀವು ಉಪವಾಸ *ಮಾಡುವಾಗ*" ಎಂದು ಹೇಳಿದನು (ಮತ್ತಾಯ 6:16; ಒತ್ತಿ ಹೇಳಿದ್ದು ನನ್ನದು). ಹೀಗಿದ್ದರೂ, "ತೋರಿಕೆಯ ಉಪವಾಸವನ್ನು" ಯೇಸು ಖಂಡಿಸಿದನು. ಫರಿಸಾಯರು ವಾರಕ್ಕೆ ಎರಡು ಸಲ ಉಪವಾಸ ಮಾಡುತ್ತಿದ್ದರು, (ಸೋಮವಾರ ಮತ್ತು ಗುರುವಾರ). ಲೂಕ 18 ನೋಡಿರಿ. ಯೇಸುವು ಆಚರಣೆಯ ಉಪವಾಸಗಳನ್ನು ಸ್ವೀಕರಿಸಲಿಲ್ಲ ಇಲ್ಲವೇ ರೂಢಿಸಲಿಲ್ಲ. ಆತನು ಅವುಗಳನ್ನು ಬಲವಾಗಿ ಖಂಡಿಸಿದನು. ಸ್ವನೀತಿಯ ಪ್ರದರ್ಶನವನ್ನು ಯೇಸುವು ದ್ವೇಷಿಸಿದನು.

ಉಪವಾಸ ಮಾಡುವದಕ್ಕಾಗಿ ಹಿಬ್ರೂ ಪದವು ಅಕ್ಷರಶಃವಾಗಿ "ಬಾಯಿಯನ್ನು ಮುಚ್ಚಿಕೊಳ್ಳುವುದು," "ಶ್ರಮೆಯಲ್ಲಿ ತನ್ನನ್ನು ತಗ್ಗಿಸಿಕೊಳ್ಳುವುದು" ಎಂದರ್ಥವಾಗುತ್ತದೆ. ಆದುದರಿಂದ ಉಪವಾಸ ಮಾಡುವುದು ಆನಂದಪಡುವದಕ್ಕಾಗಿ ಇರವುದಿಲ್ಲ, ಆದರೆ ಶೋಕಕ್ಕಾಗಿ ಇರುವುದು. ಅದು ಪಶ್ಚಾತ್ತಾಪ, ಅಗತ್ಯತೆ, ನಮ್ಮ ಸ್ವಂತ ಶಿಸ್ತು ಆಗಿರುವುದು. ಹಳೇ ಒಡಂಬಡಿಕೆಯಲ್ಲಿ ಉಪವಾಸ ಮಾಡುವವರ ಕೇಂದ್ರೀಕರಿಸುವಿಕೆಯು ಪಶ್ಚಾತ್ತಾಪವಾಗಿತ್ತು. ಪಾಪ, ಕೊರತೆ, ಮರಣ ಮತ್ತು ದುರಂತಗಳು ಉಪವಾಸ ಮಾಡುವದನ್ನು ಪ್ರಚೋದಿಸಿದವು. ಹೊಸ ಒಡಂಬಡಿಕೆಯಲ್ಲಿ ಉಪವಾಸದ ಕೇಂದ್ರವು ಪ್ರಾಧಾನ್ಯತೆಯಾಗಿತ್ತು. ಇಂದು ದಯೆಯುಳ್ಳ ಜನರು ಶಿಸ್ತನ್ನೂ ಸಮರ್ಪಣೆಯನ್ನೂ ಹಾಗೆಯೇ ತ್ಯಾಗವನ್ನೂ ಹೊಂದಿಕೊಳ್ಳಬೇಕಾದ ಅಗತ್ಯತೆಯಿದೆ. ಉಪವಾಸ ಮಾಡುವುದು ಆತ್ಮಿಕತೆಯ ಅತ್ಯಂತ ಅಗಾಧವಾದ ವ್ಯಕ್ತಪಡಿಸುವಿಕೆಯಾಗಿದೆ. ಉಪವಾಸ ಮಾಡುವುದು ತಗ್ಗಿಸಿಕೊಳ್ಳುವಂತೆ ಮಾಡುತ್ತದೆ ಎಂಬುದು ಸ್ಪಷ್ಟವಾಗಿದೆ!

ದಾವೀದನು, ಒಬ್ಬ ಮಹಾ ಪಾಪಿಯು, "ದೇವರಿಗೆ ಒಪ್ಪುವ ಮನುಷ್ಯನಾಗಿದ್ದನು" (ಅಪೊಸ್ತಲರ ಕೃತ್ಯಗಳು 13:22). ಅವನ ಜೀವಿತವು "ಹೂವುಗಳ ಹಾಸಿಗೆಯಾಗಿರಲಿಲ್ಲ." ಉಪವಾಸಮಾಡುವದರಿಂದ ದಾವೀದನು ತನ್ನನ್ನು ತಗ್ಗಿಸಿಕೊಂಡನು (ಕೀರ್ತನೆ 35:13). ಉಪವಾಸ, ಮಾಡುವದರೊಂದಿಗೆ ತನ್ನನ್ನು ಶಿಕ್ಷಿಸಿಕೊಂಡನು (ಕೀರ್ತನೆ 69:10). ಅವನ ದೇಹವು ಬಲಹೀನವಾಗುವಷ್ಟು ಅವನು ಉಪವಾಸ ಮಾಡಿದನು (ಕೀರ್ತನೆ 109:24). ದಾವೀದನ ಜೀವಿತವು ಕಣ್ಣೀರುಗಳನ್ನೊಳಗೊಂಡಿತ್ತು. ಯೇಸುವು ಕಣ್ಣೀರಿನ ಮನುಷ್ಯನಾಗಿದ್ದನು (ಇಬ್ರಿಯ 5:7). ಪೌಲನು ಸೇವೆಯು ಕಣ್ಣೀರುಗಳ ಮೇಲೆ ಸ್ಥಾಪಿಸಲ್ಪಟ್ಟಿತ್ತು - (ಅಪೊಸ್ತಲರ ಕೃತ್ಯಗಳು 20:19, 31). "ಕರ್ತನೇ, ಕಣ್ಣೀರಿನ ಸೇವೆಯೊಂದಿಗೆ ನಮ್ಮನ್ನು ಆಶೀರ್ವದಿಸು."

ಒಂದು ಮನೋಭಾವನೆಯು ಸರಿಯಾದ ಕಾರ್ಯಕ್ಕೆ ಕಾರಣವಾಗಬಹುದು. ಸರಿಸಮಾನವಾಗಿ, ಸರಿಯಾದ ಕಾರ್ಯವು ಸರಿಯಾದ ಮನೋಭಾವನೆಯನ್ನು ಬೆಳಸಬಹುದು. "ನಿನ್ನ ಪಾದಗಳು ಮೇಲೆ ನಿಲ್ಲಲಿಕ್ಕಾಗುವಂತೆ ನಿನ್ನ ಮೊಣಕಾಲುಗ

ಆನ್ನೂರು'' ಕಠಿಣವಾದ ಸಮಯಗಳು ಉಪವಾಸ ಮಾಡುವದಕ್ಕೆ ನಮ್ಮನ್ನು ಒತ್ತಾಯಿಸಬಹುದು. ಉಪವಾಸಮಾಡುವುದು ನಮ್ಮನ್ನು ಕಠಿಣವಾದ ಸಮಯಗಳಿಗೆ ಸಿದ್ಧಪಡಿಸಬಹುದು. ರೂಢಿಸುವುದು ಇಲ್ಲದೇ ಪರಿಪೂರ್ಣತೆಯು ಇರಲಾರದು, ಲಾಭವಿಲ್ಲದೇ ನೋವು ಇರಲಾರದು, ಪ್ರಯಾಣವಿಲ್ಲದೇ ಪರಲೋಕವಿರಲಾರದು. ಬೈಬಲಿಗನುಗುಣವಾದ ಉಪವಾಸ ಮಾಡುವದನ್ನು ನಾವು ಕಲಿತುಕೊಳ್ಳತಕ್ಕದ್ದು ಮತ್ತು ಅದನ್ನು ರೂಢಿಸತಕ್ಕದ್ದು. ಪ್ರಾರ್ಥನೆ ಮತ್ತು ಉಪವಾಸ ಇಲ್ಲವೇ ಸಭೆಯ ಬೆಳವಣಿಗೆ ಮತ್ತು ಸಂಪೂರ್ಣತೆ ನಮಗಿರಲಾರದು.

◇◇◇◇◇◇◇◇

# ಪ್ರಾರ್ಥಿಸಲು ಸಮಯಗಳು

## 1 ಥೆಸಲೋನೀಕ 5:17

*"ಎಡೆಬಿಡದೆ ಪ್ರಾರ್ಥನೆ ಮಾಡಿರಿ" (1 ಥೆಸಲೋನೀಕ 5:17).*

ಬೇರೆ ಯಾವುದನ್ನಾದರೂ ಮಾಡುವದಕ್ಕಿಂತ ಹೆಚ್ಚಾಗಿ ಪ್ರಾರ್ಥಿಸಲು ಬೈಬಲಿನಲ್ಲಿ ಹೆಚ್ಚು ಆಜ್ಞೆಗಳಿರುತ್ತವೆ. ಬೇರೆ ಯಾವುದಕ್ಕಿಂತ ಹೆಚ್ಚಾಗಿ ಪ್ರಾರ್ಥನೆಯನ್ನು ಕುರಿತು ಹೆಚ್ಚಾದ ವಾಗ್ದಾನಗಳಿರುತ್ತವೆ. ಪ್ರಾರ್ಥಿಸುವದರಿಂದ ನೀವು ಪ್ರಾರ್ಥಿಸುವದನ್ನು ಕಲಿಯುತ್ತೀರಿ. ಪ್ರಾರ್ಥನೆಯು ಕ್ರೈಸ್ತರ ಅದ್ವಿತೀಯವಾದ ಅವಕಾಶವೂ ಮುಖ್ಯಕೆಲಸವೂ ಆಗಿರುತ್ತದೆ. ನಾವು ಹೆಚ್ಚಾಗಿ ಯಾಕೆ ಪ್ರಾರ್ಥಿಸಬಾರದು?

(1) ಅದರ ಬಗ್ಗೆ ನಾವು "ಸರಿಯಾಗಿರುವದಿಲ್ಲ." ಪ್ರಾರ್ಥನೆಯು ಸಹಾಯಹೀನರಿಗೆ ಮಾತ್ರ ಇರುತ್ತದೆ. ಇತರರು "ಸ್ವಾಭಾವಿಕವಾಗಿ ಪ್ರಾರ್ಥಿಸುವರು" ಆದರೆ ನಾವು ಅಲ್ಲ ಎಂದು ತೀರ್ಮಾನಿಸುವುದು ಸುಲಭವಾಗಿದೆ. *ಪ್ರಶ್ನೆ:* "ನೀನು ಹೇಗೆ ಮಾಡುತ್ತಿರುವಿ?" ನಾನು ಬಹಳ ಸಲ ನನ್ನ ಪ್ರಾರ್ಥನೆಗಳನ್ನು ಹೇಳುತ್ತೇನೆ, ಆದರೆ ನಾನು ಎಂದಾದರೂ ಪ್ರಾರ್ಥಿಸುವೆನೋ? ನಿಮ್ಮ ಬಗ್ಗೆ ಏನು? ನೀನು ನಿನ್ನ ಕ್ರೈಸ್ತ ನಡೆಯುವಿಕೆಯೊಂದಿಗೆ ತೃಪ್ತನಾಗಿರುವಿಯೋ?

(2) ನಾವು ಪ್ರಾರ್ಥಿಸಲು ಯೋಜನೆ ಮಾಡುವದಿಲ್ಲ. ನಾವು ಬಹಳ ಕಾರ್ಯನಿರತರಾಗಿರುತ್ತೇವೆ. ಪ್ರಾರ್ಥನೆಯು ಗಲಿಬಿಲಿಗೊಳಿಸಲ್ಪಟ್ಟಿರುವದರಿಂದ, ಮೂಲವಾಗಿ, ನಾವು ಪ್ರಾರ್ಥಿಸುವದಿಲ್ಲ. ಉತ್ತರ ಕೊಡಲಿಕ್ಕೆ ಅನೇಕ ಜನರೂ ಮತ್ತು ಗುಣಪಡಿಸಲಿಕ್ಕೆ ಬಹಳವಾಗಿ ಗಾಯಗಳೂ ಇರುತ್ತವೆ. ಆದುದರಿಂದ, ನಮ್ಮ ಬಲಹೀನ ಮನಸ್ಸುಗಳಿಗೆ, ಪ್ರಾರ್ಥನೆಯು ಒಂದು ಐಶರಾಮವಾಗಿದೆ, ಆದರೆ ಒಂದು ಅಗತ್ಯತೆಯಾಗಿರುವದಿಲ್ಲ. ಈ ಕಾರಣಗಳಿಂದ, ನಾವು ಲಿಟ್ರೀಟುಗಳಲ್ಲಿರುವಾಗ, ಇಲ್ಲವೇ ಕೆಲಸದ ಜೀವನದಿಂದ ದೂರವಿರುವಾಗ ಮಾತ್ರವೇ ನಾವು ಪ್ರಾರ್ಥಿಸುತ್ತೇವೆ. ಪ್ರಾರ್ಥನೆಯು ಪರ್ವತದ ಮೇಲೆ ಮಾಡಲ್ಪಡಬಹುದು, ಆದರೆ ಅದರ ಬಲವು ಬೀದಿಗಾಗಿರುವುದು. ನಾವು ಪ್ರಾರ್ಥಿಸಲು ಯೋಜಿಸತಕ್ಕದ್ದು! ಪ್ರಾರ್ಥಿಸಲು ನಾವು ಸಿದ್ಧಪಡಿಸತಕ್ಕದ್ದು, ಪ್ರಾರ್ಥಿಸಲಿಕ್ಕೆ ಸಮಯ ಮಾಡಿಕೊಳ್ಳತಕ್ಕದ್ದು. ಪ್ರಾರ್ಥನೆಯು ನಮ್ಮ ಜೀವಿತಗಳಲ್ಲಿ ಕೇಂದ್ರವಾಗಿರತಕ್ಕದ್ದೆಂದು ನಾವು ತಿಳಿದಿರುವೆವು, ಆದಾಗ್ಯೂ ಅದನ್ನು ಮಾಡಲಿಕ್ಕೆ ಸಮಯವನ್ನು ಪ್ರತ್ಯೇಕವಾಗಿ ಇಡುವದನ್ನು ನಿರಾಕರಿಸುತ್ತೇವೆ. ನಾವು ಇನ್ನೊಂದು ನಾಶನಕರ ತಪ್ಪನ್ನು

ಮಾಡುತ್ತೇವೆ: ನಮ್ಮ ವೇಳಾಪತ್ರಿಕೆಗೆ (ತಪ್ಪಾದ) ಪ್ರಾಧಾನ್ಯತೆ ಕೊಡುವುದು ಒಂದು ಸಂಗತಿಯಾಗಿದೆ; ನಮ್ಮ ಪ್ರಾಧಾನ್ಯತೆಗಳಿಗೆ ವೇಳಾಪಟ್ಟಿ ಮಾಡುವುದು ಇನ್ನೊಂದು ಸಂಗತಿಯಾಗಿದೆ. ನೀವು ಪ್ರಾರ್ಥನೆ ಮಾಡದಷ್ಟು ಕಾರ್ಯನಿರತರಾಗಿದ್ದರೆ, ನೀವು ಬಹಳವಾಗಿ ಕಾರ್ಯನಿರತರಾಗಿರುವಿರಿ.

(3) ನಾವು ಹೆಚ್ಚು ಪ್ರಾರ್ಥನೆ ಯಾಕೆ ಮಾಡಬಾರದು? ಮೊದಲನೆಯ ಸಂಗತಿಯು, ಅತೀ ಕಠಿಣವಾದ ಸಂಗತಿಯು, ಅತ್ಯವಶ್ಯಕರವಾಗಿರುವ ಸಂಗತಿಯು - ಪ್ರಾರ್ಥಿಸುವದಕ್ಕೆ ಸಮಯ ತೆಗೆದುಕೊಳ್ಳುವುದಾಗಿದೆ! ಸರಳವಾದದ್ದು? ಹೌದು! ಸುಲಭವಾದದ್ದು? ಇಲ್ಲ! ಎಷ್ಟು ಚೆನ್ನಾಗಿ ಅದನ್ನು ಮಾಡುವಿರಿ ಎಂಬುದಲ್ಲ, ಆದರೆ ಅದನ್ನು ನೀವು ಮಾಡುವಿರೋ ಎಂಬುದು. ಇಲ್ಲದಿದ್ದರೆ, ಪ್ರಾರ್ಥನೆಯು ಅಡಿಗೆ ಮಾಡುವದಕ್ಕಿಂತ ಅಡಿಗೆ ಮಾಡುವ ಪುಸ್ತಕವನ್ನು ಓದುವಂತಿರುತ್ತದೆ. ನೀವು ಅಡಿಗೆ ಮಾಡುವದಿಲ್ಲ ಮತ್ತು ಅಡಿಗೆ ಪುಸ್ತಕವನ್ನು ತಿನ್ನುವದಿಲ್ಲ. *ಮೊದಲು ಪ್ರಾರ್ಥಿಸಿರಿ.*

(4) ನಾವು ದೇವರ ಮೇಲೆ ಸಂಶಯಪಡುತ್ತೇವೆ. "ಆತನು ನಿನ್ನ ಪ್ರಾರ್ಥನೆಯನ್ನು ಉತ್ತರಿಸುತ್ತಾನೆ, ಆದರೆ ನನ್ನ ಪ್ರಾರ್ಥನೆಯನ್ನು ಅಲ್ಲ'' ಎಂದು ನಾವು ಯೋಚಿಸುತ್ತೇವೆ. ನಿರಾಶೆಯಲ್ಲಿ ಜನರು ನನಗೆ, "ಅದರ ಬಗ್ಗೆ ನಾನು ಪ್ರಾರ್ಥಿಸಿದೆನು, ಮತ್ತು ಏನೂ ಸಂಭವಿಸಲಿಲ್ಲ'' ಎಂದು ನನಗೆ ಹೇಳುತ್ತಾರೆ. "ಅದರ ಬಗ್ಗೆ ಅಷ್ಟು ಅಸಾಮಾನ್ಯವಾದದ್ದು ಏನಿದೆ?'' ಎಂದು ಉತ್ತರ ಹೇಳುವದನ್ನು ನಾನು ಕಲಿತುಕೊಂಡಿದ್ದೇನೆ. ನಾವು ದೇವರಿಗೆ - ಉತ್ತರ ಕೊಡುತ್ತೇವೆ ಎಂಬುದನ್ನು ನಿಶ್ಚಿತಪಡಿಸುವದಕ್ಕಿಂತ ಹೆಚ್ಚಾಗಿ, ದೇವರು ನಮಗೆ ಉತ್ತರ ಕೊಡಬೇಕೆಂದು ಬೇಡಿಕೊಳ್ಳುತ್ತೇವೆ. ಜ್ಞಾಪಿಸಿಕೊಳ್ಳಿರಿ, ಮನುಷ್ಯನು - ದೇವರು ಅಲ್ಲ - ಯಾವಾಗಲೂ ಪ್ರಾರ್ಥನೆಯು ವ್ಯರ್ಥಮಾಡಲ್ಪಟ್ಟಾಗ ಸಮಸ್ಯೆಯಾಗಿದ್ದಾನೆ.

(5) ಪ್ರಾರ್ಥನೆಯು ಉಳಿದ ಎಲ್ಲವೂ ಸೋತುಹೋಗುವಾಗ ಉಪಯೋಗಿಸುವ "ಬೆಂಬಲ ಪದ್ಧತಿ'' ಆಗಿರುವದಿಲ್ಲ. ಪ್ರಾರ್ಥನೆಯು ಪ್ರತಿಯೊಂದು ಅಗತ್ಯತೆಗಾಗಿ ಒದಗಿಸುವಿಕೆಯೂ, ಪ್ರತಿಯೊಂದು ಸಮಸ್ಯೆಗೆ ಪರಿಹಾರವೂ ಆಗಿರುತ್ತದೆ. ದೇವರ ವಾಕ್ಯವು ತನ್ನ ಕಾರ್ಯವನ್ನು ಮಾಡುವುದು; ಪ್ರಾರ್ಥನೆಯು ತನ್ನ ಕಾರ್ಯವನ್ನು ಮಾಡುವುದು. ನಾನು ಒಬ್ಬ "ಬಾಲಕ ಪ್ರಸಂಗಿ'' ಆಗಿದ್ದಾಗ, "ಕ್ರಿಸ್ತನಿಲ್ಲದೆ ನಾನು ಏನನ್ನೂ ಮಾಡಲಾರೆನು'' (ಯೋಹಾನ 15:1-11) ಎಂಬ ಪದಗುಚ್ಛದೊಂದಿಗೆ ನನ್ನನ್ನು ಗುರುತಿಸಿಕೊಳ್ಳಲಾರದಾಗಿದ್ದೆನು. ನಾನು ಈಗ ಹಳೇ ಪ್ರಸಂಗಿಯಾಗಿದ್ದು ಅದು ನನ್ನ ಸರ್ವಸ್ವವೂ ಆಗಿರುತ್ತದೆ. ಯುವ ಪ್ರಸಂಗಿಗಳಿಗೆ ನಾನು ಬೋಧಿಸುವಾಗ, ಬೈಬಲಿನಲ್ಲಿ "ಸಾಧನೆಗಳನ್ನು'' ನೋಡಬೇಕೆಂದು ಅವರನ್ನು ಆಹ್ವಾನಿಸುತ್ತೇನೆ. ಅದು ಅಲ್ಲಿ ಇರುವದಿಲ್ಲ. "ಕ್ರಿಸ್ತನಿಲ್ಲದೇ, ನಾನೇನೂ ಆಗಿರುವದಿಲ್ಲ'' ಎಂಬುದನ್ನು ಒಬ್ಬನು ಕಲಿಯುವಾಗ, ಅದು ಒಂದು ದೊಡ್ಡ ದಿನವಾಗಿರುವುದು.

## ಒಂದು ಸಮಯ

ಬೈಬಲಿನ ದೊಡ್ಡ ಮನುಷ್ಯರು ಪ್ರಾರ್ಥನೆಯ ಮನುಷ್ಯರಾಗಿದ್ದರು. ದಾನಿಯೇಲನು, ಬಬಿಲೋನಿನಲ್ಲಿ, ಯೋರೂಸಲೇಮಿನ ಕಡೆಗೆ ತನ್ನ ಕಿಟಕಿಗಳನ್ನು ತೆರದು ಮೊಣಕಾಲೂರಿ, ಉಪಕಾರಗಳೊಂದಿಗೆ ದಿನಪ್ರತಿ ಮೂರು ಸಲ ಪ್ರಾರ್ಥಿಸಿದನು (ದಾನಿಯೇಲ 6:10). ಸಿಂಹಗಳು ಅವನನ್ನು ಮುಟ್ಟುವದನ್ನು ತಿರಸ್ಕರಿಸಿದವು! ದಾವೀದನು ದಿನಕ್ಕೆ ಮೂರು ಸಲ - ಸಾಯಂಕಾಲ, ಪ್ರಾತಕ್ಕಾಲ ಮತ್ತು ಮಧ್ಯಾಹ್ನ - ಪ್ರಾರ್ಥಿಸಿದನು (ಕೀರ್ತನೆ 55:17; 5:3). ನೆಹೆಮೀಯನು ಯೆರೂಸಲೇಮಿಗಾಗಿ ಎಡೆಬಿಡದೆ ಪ್ರಾರ್ಥಿಸಿದನು.

ಮೋಶೆಯು ಡೇರೆಗೆ ಹೋಗಿ, ಪ್ರಾರ್ಥಿಸಲು ಸಿದ್ಧನಾದಾಗ, ಎಲ್ಲಾ ಇಸ್ರಾಯೇಲ್ಯರು ಕಾದುಕೊಂಡಿದ್ದರು (ವಿಮೋಚನಕಾಂಡ 33:8). ದೇವರು ಬೆಳಗಾಗುವದಕ್ಕಿಂತ ಮುಂಚೆ (ಮಾರ್ಕ 1:35), ಅಪೊಸ್ತಲರನ್ನು ಆಯ್ಕೆಮಾಡುವ ಮೊದಲು ರಾತ್ರಿಯೆಲ್ಲಾ (ಲೂಕ 10:12-16), ಮತ್ತು ಹನ್ನೆರಡು ಜನರ ಮಧ್ಯದಲ್ಲಿ (ಲೂಕ 11:1) ಪ್ರಾರ್ಥಿಸಿದನು. ಪೇತ್ರನು ಮಧ್ಯಾಹ್ನನ ಪ್ರಾರ್ಥಿಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 10:9). ಪೌಲನು ಹೊರಟು ಹೋಗುತ್ತಿದ್ದಾಗ, ಎಫೆಸದ ಹಿರಿಯರೊಂದಿಗೆ ಪ್ರಾರ್ಥಿಸಿದನು (ಅಪೊಸ್ತಲರ ಕೃತ್ಯಗಳು 20:36). ಅಲ್ಲಿ ಅವನ ಸೇವೆಯು ಪ್ರಾರ್ಥನೆಗ ಳನ್ನೂ ಕಣ್ಣೀರನ್ನೂ ಒಳಗೊಂಡಿತ್ತು. "ಸಭಾಮನೆಯು" ಪ್ರಾರ್ಥನೆಯೊಂದಿಗೆ ನಡುಗಿತು (ಅಪೊಸ್ತಲರ ಕೃತ್ಯಗಳು 4:31). ಎಲ್ಲಾ ಕಡೆಗಳಲ್ಲಿ ಪ್ರಾರ್ಥಿಸಬೇಕೆಂದು ಪೌಲನು ಆಜ್ಞಾಪಿಸಿದನು (1 ತಿಮೊಥೆ 2:8). ಪೌಲನ ಗುಂಪು ಹಗಲೂ ರಾತ್ರಿ ಪ್ರಾರ್ಥಿಸಿತು (1 ಥೆಸಲೊನೀಕ 3:10).

ನಮಗೆ ಸಮಯ ಇರತಕ್ಕದ್ದು! "ಪ್ರಾರ್ಥನೆಯು ಪ್ರಾತಃಕ್ಕಾಲದಲ್ಲಿ ಮೊದಲನೆಯ ವ್ಯವಹಾರವಾಗಿರುವುದು ಮತ್ತು ರಾತ್ರಿಯಲ್ಲಿ ಕೊನೆಯ ವ್ಯವಹಾರ ಆಗಿರುವುದು" ಎಂದು ಮಾರ್ಟಿನ್ ಲೂಥರ್ ಹೇಳಿದನು. ಪ್ರಾರ್ಥನೆಯು ದಿನದ ಬೀಗದ ಕೈ ಮತ್ತು ರಾತ್ರಿಯಲ್ಲಿ ಬೀಗಹಾಕುವಿಕೆಯಾಗಿದೆ. "ಪ್ರಾರ್ಥನೆಯು ಸಮಯವನ್ನು ರಕ್ಷಿಸುತ್ತದೆ" ಎಂದೂ ಲೂಥರ್ ಹೇಳಿದ್ದಾನೆ.

ಪ್ರಾರ್ಥನೆಯಲ್ಲಿ ನನ್ನ ಅತಿ ದೊಡ್ಡ ತಪ್ಪು ನಾನು ನನ್ನ ಸಮಯದಲ್ಲಿ ಮತ್ತು ನನ್ನ ಗಡುವಿನ ಮೇಲೆ ಮಾತ್ರ ಪ್ರಾರ್ಥಿಸುತ್ತೇನೆ. ಇದು ಒಂದು ನಿರ್ಣಾಯಕ ತಪ್ಪಾಗಿರುತ್ತದೆ. ದೇವರ ಸಮಯ ಮತ್ತು ಶರತ್ತುಗಳ ಮೇಲೆ ಮಾತ್ರವೇ ನಾವು ಪ್ರಾರ್ಥಿಸಬಹುದು! ದೇವರು ಎರಡನೆಯ ಸ್ಥಾನವನ್ನು ಸ್ವೀಕರಿಸುವದಿಲ್ಲ. ಆತನು ನಮ್ಮ ರೊಟ್ಟಿಯ ತುಂಡುಗಳನ್ನು ಸ್ವೀಕರಿಸುವದಿಲ್ಲ. ನಮ್ಮ ಕಾರ್ಯಭರಿತ ವೇಳಾಪತ್ರಿಕೆಗಳು ದೇವರನ್ನು ಹೊರಗಿಡುತ್ತವೆ. ನಮ್ಮಲ್ಲಿ ಹೆಚ್ಚಾದವರು "ಓಟದ ಮೇಲೆ" ಪ್ರಾರ್ಥಿಸಲು ಪ್ರಯತ್ನಿಸುತ್ತೇವೆ. ಇದೂ ಸಹ ಸೋತು ಹೋಗುತ್ತದೆ. "ಓಟದ ಮೇಲೆ" ಯಾವುದನ್ನೂ ಸರಿಯಾಗಿ ಮಾಡಲಿಕ್ಕಾಗುವದಿಲ್ಲ. ಕ್ರೈಸ್ತತ್ವದಲ್ಲಿ ಮುಖ್ಯವಾದ ಅಂಶವು ಸಮಯವಾಗಿದೆ - ಬಿಡಲ್ಪಟ್ಟ ಸಮಯವಲ್ಲ, ಎಸೆದು ಬಿಡುವ ಸಮಯವಲ್ಲ, ಆದರೆ ಗುಣವುಳ್ಳ ಸಮಯ ವಾಗಿದೆ. ಕೇಂದ್ರೀಕರಿಸಲಿಕ್ಕೆ, ಧ್ಯಾನಕ್ಕೆ, ಪ್ರತಿಬಿಂಬಿಸಲಿಕ್ಕೆ ಭಕ್ತಿ ತೋರಿಸಲಿಕ್ಕೆ ಇರುವ ಸಮಯವು ಅವಸಕಿಸಬಾರದ್ದು - ತಡೆಹಾಕಲ್ಪಡದ ಸಮಯವಾಗಿರುತ್ತದೆ! ನೀವು ಒಂದು ಗೂಗೆಯಾಗಿರಬಹುದು; ನೀವು ಒಂದು ಹುಂಜವಾಗಿರಬಹುದು. ನೀನು ಏನೇ ಆಗಿರಬಹುದು, ಒಂದು ಸಮಯವನ್ನು ನೇಮಿಸಿ ಅದನ್ನು ಕೈಕೊಳ್ಳು. ಪ್ರಾರ್ಥನೆಯು ಕಾರಣಗಳಿಲ್ಲದ್ದಾಗಿರುವದಿಲ್ಲ; ಆದರೆ ಗಲಿಬಿಲಿಯಿಂದ ತುಂಬಿದ್ದಾಗಿರುವದಿಲ್ಲ. ಬೇಗನೇ ಏಳುವುದರ ಕಾರಣವು ಬೇಗನೇ ಮಲಗುವುದು ಆಗಿರುತ್ತದೆ. "ಬೇಗನೇ ಏಳಲಾರದ" ವ್ಯಕ್ತಿಯು ಎಂದೂ ಯಶಸ್ಸನ್ನು ಹೊಂದುವದಿಲ್ಲ!

ಪ್ರಾರ್ಥನೆಯ ಜೀವಿತವನ್ನು ಪ್ರಾರಂಭಿಸುವುದು ಕಠಿಣವಾದದ್ದು ಆಗಿರುವುದು ಮಾತ್ರವಲ್ಲದೇ, ಮುಂದುವರಿಸುವುದು ಇನ್ನೂ ಕಠಿಣವಾದದ್ದಾಗಿರುವುದು. ನಾವು ಪ್ರಾರಂಭಿಸುತ್ತೇವೆ, ಆದರೆ ನಮ್ಮ ದಿನನಿತ್ಯದ ಕಾರ್ಯಗಳಿಂದ ದೂಡಲ್ಪಡುತ್ತವೆ, ಆ ಮೇಲೆ ಬಿಟ್ಟು ಬಿಡುತ್ತೇವೆ. ನಾವು ಬಿಟ್ಟೂಬಿಡದೇ ತಿನ್ನುತ್ತೇವೆ; ನಾವು ಎಡೆಬಿಡದೆ ಪ್ರಾರ್ಥಿಸಬೇಕು. ಜೀವನದ ಸರಳ ಸಮಯಗಳಲ್ಲಿ ಸತತವಾದ ಪ್ರಾರ್ಥನೆಯು ಒಬ್ಬನನ್ನು ಬಿರುಗಾಳಿಗಳಿಗೆ ಸಿದ್ಧನನ್ನಾಗಿ ಮಾಡುತ್ತದೆ. ಬಿರುಗಾಳಿಗಿಂತ ಮೊದಲು ನೀವು ಪ್ರಾರ್ಥಿಸುತ್ತ ಇರದಿದ್ದರೆ, ಬಿರುಗಾಳಿಯ ಸಮಯದಲ್ಲಿ (ಅಪಘಡಗಳ

ಸಮಯದಲ್ಲಿ) ಪ್ರಾರ್ಥಿಸುವುದು ಬಹಳ ತಡವಾಗಬಹುದು. ಪ್ರಾರ್ಥಿಸಲು ನಿಮಗೆ ಪ್ರಾರ್ಥನೆಯ ಅವಶ್ಯಕತೆ ಬೀಳುವ ವರೆಗೆ ಕಾದುಕೊಂಡಿರಬೇಡಿರಿ! ಪ್ರಾರ್ಥನೆಯು ಒಂದು ರೂಢಿಯಾಗಬೇಕು - ಆದರೆ ಎಂದೂ ರೂಢಿಗೆ ಕೇಳಗಿಳಿಸಲ್ಪಡಬಾರದು.

ದಾವೀದನು ಪ್ರತೀದಿನ ದೇವರನ್ನು ಏಳು ಸಲ ಕೊಂಡಾಡಿದನು (ಕೀರ್ತನೆ 119:164). "ದಿನವೆಲ್ಲಾ ಅವನು" ಅಕ್ಷರಶಃವಾಗಿ ಪ್ರಾರ್ಥಿಸಿದನು. ದೇವರೊಂದಿಗೆ ದಿನವನ್ನು ಪ್ರಾರಂಭಿಸಿರಿ, ಸ್ತೋತ್ರದ ಬಿಡುವುಗಳನ್ನು ತೆಗೆದುಕೊಳ್ಳಿರಿ, ಮತ್ತು ದಿನವನ್ನು ದೇವರೊಂದಿಗೆ ಮುಗಿಸಿರಿ. ಸ್ನೇಹಿತರೇ ಸಮಯವನ್ನು ತೆಗೆದುಕೊಳ್ಳಿರಿ; ಪ್ರಾರ್ಥನೆಯು ಸಮಯವನ್ನು ತೆಗೆದುಕೊಳ್ಳುತ್ತದೆ. ರಾತ್ರಿಯೆಲ್ಲಾ ನೀವು ಪ್ರಾರ್ಥಿಸುವಿರೋ? ಒಂದು ತಾಸು? ಪ್ರತಿದಿನ? *ಪ್ರಶ್ನೆ:* ನೀವು ಹೇಗೆ ಮಾಡುತ್ತಿರುವಿರಿ? ಪ್ರಾರ್ಥನೆಯಲ್ಲಿ ದಿನಗಳು ಆಕಸ್ಮಿಕವಾಗಿ ಸಂಭವಿಸುವದಿಲ್ಲ. ಅವು ಸಂಭವಿಸುವಂತೆ ಮಾಡಿರಿ. ನಿಜವಾದ ಪ್ರಾರ್ಥನೆಯು ನಾವು ಮೊಣಕಾಲೂರುವಾಗ ಪ್ರಾರಂಭವಾಗುವದಿಲ್ಲ ಇಲ್ಲವೇ ನಾವು ಏಳುವಾಗ ನಿಲ್ಲುವದಿಲ್ಲ. *ಮೊದಲು ಪ್ರಾರ್ಥಿಸಿರಿ.*

## ಒಂದು ಸ್ಥಳ

ಪ್ರಾರ್ಥನೆಯು ಒಂದು ಸಮಯವನ್ನು ಮತ್ತು ಒಂದು ಸ್ಥಳವನ್ನು ಕೇಳುತ್ತದೆ. ಯೇಸುವಿಗೆ ಗೆತ್ಸೇಮನೆಯಿತ್ತು. ಆತನು ಪರ್ವತಗಳನ್ನು ಉಪಯೋಗಿಸಿದನು. "ಪ್ರಾರ್ಥನೆಯ ಕೋಣೆಯನ್ನು" ಆತನು ಆಜ್ಞಾಪಿಸಿದನು ("ಒಳಗಿನ ಕೋಣೆ"; ಮತ್ತಾಯ 6:6). ಮನೆಯ ಒಳಕೋಣೆಗಳು ಇತ್ತೀಚೆಗಿನ ಐಶರಾಮಗಳಾಗಿವೆ. ಯೇಸುವಿನ ದಿನದಲ್ಲಿ ಚಿಕ್ಕದಾದ, ಒಂದು ಕೋಣೆಯ ಮನೆಯಲ್ಲಿ ಅಂಥ ಯಾವುದೂ ಇರಲಿಲ್ಲ. ಯೆಹೂದಿ ಪುರುಷನು ಅಂಗವಸ್ತ್ರವನ್ನು (ಪ್ರಾರ್ಥನಾ ಶಾಲನ್ನು) ಧರಿಸುತ್ತಿದ್ದನು. (ನೋಡಿರಿ ಅರಣ್ಯಕಾಂಡ 15:37-41.) ಪ್ರತ್ಯೇಕತೆ ಇರಲು - ಒಂದು "ಪ್ರಾರ್ಥನೆಯ ಅಂತರಂಗದ ಕೋಣೆಯಿರಲು" ಒಬ್ಬ ಯೆಹೂದ್ಯನು ತನ್ನ ಅಂಗ ವಸ್ತ್ರವನ್ನು ತನ್ನ ತಲೆಗೆ ಸುತ್ತಿಕೊಳ್ಳುತ್ತಿದ್ದನು. ಇಂಗ್ಲಾಂಡಿನಲ್ಲಿ ವೆಸ್ಲಿ ಬಾಲಕರ ತಾಯಿಯು (ಹತ್ತೊಂಭತ್ತು ಜನ ಮಕ್ಕಳೊಂದಿಗೆ) ದಿನವೂ ಪ್ರಾರ್ಥನೆ ಮಾಡುತ್ತಿದ್ದಳೆಂದು ಚರಿತ್ರೆಯು ಹೇಳುತ್ತದೆ. ಆಕೆ ತನ್ನ ಖುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದಳು, ತನ್ನ ಏಪ್ರನನ್ನು ತನ್ನ ತಲೆಯ ಮೇಲೆ ಎಳೆದುಕೊಳ್ಳುತ್ತಿದ್ದಳು ಮತ್ತು ಆಗ ಪ್ರಾರ್ಥಿಸುತ್ತಿದ್ದಳು. ಈ ಸಮಯವನ್ನು ಬಹಳವಾಗಿ ಗೌರವಿಸುವದರಲ್ಲಿ ಮಕ್ಕಳು ಬೆಳೆಯಿಸಲ್ಪಟ್ಟರು. ನಮಗೆ ಸಮಯ ಮತ್ತು ಸ್ಥಳ ಇಲ್ಲದಿದ್ದರೆ, ನಾವು ಪ್ರಾರ್ಥನೆ ಮಾಡಲಾರೆವು. ನತಾನಿಯೇಲನಿಗೆ ಬಹುಶಃ "ಅಂಜೂರದ ಮರವು" ಇದ್ದಿರುವ ಸಾಧ್ಯತೆಯಿದೆ (ಯೋಹಾನ 1:48). ಒಂದು "ಮೌನ ಸಮಯಕ್ಕೆ" ಬಂದು "ಮೌನಸ್ಥಳದ" ಅಗತ್ಯತೆಯಿರುತ್ತದೆ. ಸಮಯದಲ್ಲಿ ಮತ್ತು ಸ್ಥಳದಲ್ಲಿ ದಿನನಿತ್ಯದ ಕಾರ್ಯವಿರಲಿ - ಒಂದು ನಿಶ್ಚಿತವಾದ ಸಮಯ ಮತ್ತು ಒಂದು ನಿಶ್ಚಿತವಾದ ಸ್ಥಳ "ಯಾವುದೇ ಕಡೆಯಲ್ಲಿ" ಪ್ರಾರ್ಥಿಸುವುದು "ಎಲ್ಲಿಯೂ ಪ್ರಾರ್ಥಿಸುವದಿಲ್ಲ" ಎಂಬುದು ಸುಲಭವಾಗಿ ಆಗುತ್ತದೆ; "ಯಾವುದೇ ಸಮಯದಲ್ಲಿ" ಎಂಬುದು "ಯಾವುದೇ ಸಮಯದಲ್ಲಿ ಪ್ರಾರ್ಥಿಸುವದಿಲ್ಲ" ಎಂಬುದು ಸುಲಭ ವಾಗುತ್ತದೆ. ನಾವು ಅದನ್ನು ಮಾಡಲಿಕ್ಕೆ ಬಯಸುತ್ತೇವೆ; ನಾವು ಅದನ್ನು ಮಾಡಲು ನಿರ್ಣಯಿಸಿ ಕೊಳ್ಳತಕ್ಕದ್ದು; ಆಗ ನಾವು ಅದನ್ನು ಮಾಡತಕ್ಕದ್ದು. ನಾವು ಪ್ರಾರ್ಥಿಸದಿದ್ದರೆ, ನಾವು ಹಾಗೆ ಮಾಡಲು ನಿರ್ಧರಿಸಿಕೊಂಡಿರಲಿಲ್ಲ ಎಂಬುದು ಪ್ರಾಮಾಣಿಕತೆಯಿಂದ ಕಂಡುಬರುತ್ತದೆ. ಕೆಲವರು ತಮ್ಮ ಕಾರ್ಯನಿರತ ಕಾರ್ಯಕ್ರಮಗಳು ಪ್ರಾರ್ಥನೆಗಾಗಿ ಸಮಯವನ್ನು ಉಳಿಸಿಕೊಡುವುದಿಲ್ಲವೆಂದು ವಾದಿಸುತ್ತಾರೆ. ಯಾವನಾದರೂ ತನಗೆ

ಕೆಲಸ ಮಾಡಲಿಕ್ಕೆ ಸಮಯವು ಇಲ್ಲದಷ್ಟು ಪ್ರಾರ್ಥಿಸುವದನ್ನು ನೀವು ತಿಳಿದಿರುವಿರೋ? ಪ್ರಾರ್ಥನೆಯು ಒಬ್ಬನು ಮಾಡಬಹುದಾದ ಅತಿ ದೊಡ್ಡ ಕಾರ್ಯಾಚರಣೆಯ ಸಂಗತಿಯಾಗಿದೆ.

ಪ್ರಾರ್ಥಿಸುವದಕ್ಕಾಗಿ ನಮಗೆ ಸ್ಥಳವಿರುವಂಥದ್ದು ಆ ಸ್ಥಳವನ್ನು ನಮಗೆ "ಪರಿಶುದ್ಧವಾದದ್ದನ್ನಾಗಿ" ಮಾಡುತ್ತದೆ. ನಮ್ಮ ಪ್ರಾಪಂಚಿಕ ಜಗತ್ತಿನಲ್ಲಿ ಕೆಲವು ಸಂಗತಿಗಳು "ಪರಿಶುದ್ಧವಾದವುಗಳು" ಆಗಿರುತ್ತವೆ. ನಾವು "ಪರಿಶುದ್ಧ ತಾಸುಗಳನ್ನು" ಮತ್ತು "ಪರಿಶುದ್ಧ ಸ್ಥಳಗಳನ್ನು" ಮಾಡಿಕೊಳ್ಳತಕ್ಕದ್ದು. ದೇವರು ಪ್ರಮುಖ ಸಮಯಕ್ಕೆ ಅರ್ಹನಾಗಿದ್ದಾನೆ, ಸಾಕಾಗಿ ಬಿಟ್ಟವುಗಳಿಗಾಗಿ ಅಲ್ಲ. ದೇವರು ಬುದ್ಧಿವಂತಿಕೆಯ ಸ್ಥಳವನ್ನು ಕೇಳುತ್ತಾನೆ. ಒಂದನ್ನು ಕಂಡುಕೊಳ್ಳಿರಿ. ನಾನು ಕಾರಿನಲ್ಲಿ ಪ್ರಾರ್ಥಿಸುವದನ್ನು ಮೆಚ್ಚಿಕೊಳ್ಳುತ್ತೇನೆ. ನಾನು ಬಹಳವಾಗಿ ಪ್ರಯಾಣಮಾಡುವದರಿಂದ ವಿಮಾನಗಳು, ಹೋಟೆಲುಗಳು ಪ್ರಾರ್ಥಿಸಲು ಅತ್ಯುತ್ತಮ ಸ್ಥಳಗಳಾಗಿರುತ್ತವೆ. ಹೀಗಿದ್ದರೂ, ನಾನು ಮನೆಯನ್ನು ಹೆಚ್ಚಾಗಿ ಅಪೇಕ್ಷಿಸುತ್ತೇನೆ. ಪ್ರಾರ್ಥನೆಯು ಮರಣಕ್ಕೆ ಪೂರ್ವಾಭಿನಯವಾಗಿರುವುದು. ಅದು ಸ್ವಚಿತ್ತಕ್ಕೆ "ದೇವರಂತೆ ಆಟವಾಡುವದಕ್ಕೆ" ಅಂತ್ಯವಾಗಿರುವುದು. ನಾವು ಪ್ರಾರ್ಥನೆ ಮಾಡುವಾಗ, ನಾವು ಸಮಯಕ್ಕೆ, ಅಪೇಕ್ಷೆಗಳಿಗೆ, ನಮ್ಮ ಹಟಮಾರಿಚಿತ್ತಕ್ಕೆ ಸಾಯುವೆವು. *ಯಾವುದೆ ದಿನ ನಾವು ಮಾಡಬಹುದಾದ ಅತೀ ಮಹತ್ವದ ಸಂಗತಿಯು ಪ್ರಾರ್ಥಿಸುವುದು ಆಗಿರುತ್ತದೆ.*

## ಆಸನ

ಆಸನವು ಪ್ರಾರ್ಥನೆಯಲ್ಲಿ ಮುಖ್ಯವಾದ ಅಂಶವಾಗಿರುವದಿಲ್ಲ, ಆದರೆ ಅದು ಮಹತ್ವದ ಪಾತ್ರವಹಿಸುತ್ತದೆ. ದೇವರ ಮನುಷ್ಯರು ಮೊಣಕಾಲೂರಿದರು, ತಮ್ಮ ಮುಖಗಳ ಮೇಲೆ ಅಡ್ಡಬಿದ್ದರು, ತಮ್ಮ ತಲೆಗಳನ್ನು ಬಾಗಿಸಿದರು, ನಡುಗಿದರು, ನಿಂತುಕೊಂಡರು, ಪರಿಶುದ್ಧ ಹಸ್ತಗಳನ್ನು ಮೇಲಕ್ಕೆತ್ತಿದರು. ಯೇಸುವು ಇವುಗಳಲ್ಲಿ ಹೆಚ್ಚಾದವುಗಳನ್ನು ಮಾಡಿದನು. ಆಸನವು ಸಹಾಯ ಮಾಡುತ್ತದೆ ಮತ್ತು ಪ್ರಾರ್ಥನೆಯ ಮನೋಭಾವನೆಯನ್ನು ಘೋಷಿಸುತ್ತದೆ; ಮನೋಭಾವನೆಯು ಆಸನವನ್ನು ನಿರ್ಧರಿಸುತ್ತದೆ. ಮೊಣಕಾಲೂರುವುದು ಒಪ್ಪಿಸಿಕೊಡುವಿಕೆಯಾಗಿದೆ ... ನಿಂತುಕೊಳ್ಳುವುದು ಆನಂದವಾಗಿದೆ. ಪರಿಶುದ್ಧ ಕೈಗಳನ್ನು ಮೇಲಕ್ಕೆತ್ತುವದರಿಂದ ಜನರು ಪ್ರಾರ್ಥಿಸಿದರು (1 ತಿಮೊಥೆ 2:8). ಒತ್ತು ಕೊಡುವಿಕೆಯು "ಪರಿಶುದ್ಧ" ಎಂಬುದರ ಮೇಲಿದೆ, ಕೇವಲ ಕೈಗಳನ್ನು ಮೇಲಕ್ಕೆತ್ತುವುದು ಅಲ್ಲ, ಅಲಂಕಾರಿಕವಾಗಿ, ಇದು ಪರಿಶುದ್ಧ ಜೀವಿತಗಳಿಂದ ಯಥಾರ್ಥವಾದ ಪ್ರಾರ್ಥನೆಯು ಬರುತ್ತದೆ ಎಂದರ್ಥವಾಗುತ್ತದೆ. ಬಹುಶಃ ಹೆಚ್ಚಾದವರು "ಜೋಲು ಬೀಳುತ್ತಾರೆ." ನಾವು ನಮ್ಮ ಮಕ್ಕಳಿಗೆ ತಮ್ಮ ತಲೆಗಳನ್ನು ಬಾಗಿಸಬೇಕು ಮತ್ತು ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಬೇಕು ಎಂದು ಕಲಿಸುತ್ತೇವೆ. ಎಲ್ಲಾ ಜನರು ಪ್ರಾರ್ಥನೆಯಲ್ಲಿ ಮೊಣಕಾಲೂರಲು ಕಟ್ಟಡಗಳಲ್ಲಿ "ಆಮೆನ್ ಮೂಲೆಗಳು" ಚರ್ಚಿನಲ್ಲಿ ಇರುತ್ತಿದ್ದವು. "ನಿನ್ನ ಕಾಲಿನ ಕೆರೆಗಳನ್ನು ತೆಗೆದಿಡು, ಯಾಕಂದರೆ ನೀನು ನಿಂತಿರುವುದು ಪರಿಶುದ್ಧ ಸ್ಥಳವಾಗಿದೆ" ಎಂದು ದೇವರು ಮೋಶೆಗೆ ಹೇಳಿದನು (ವಿಮೋಚನಕಾಂಡ 3:5).

ಆಸನಕ್ಕೆ ಅದರ ಸ್ಥಾನವಿದೆ! ಯಾರು "ಯಜಮಾನ" ಎಂಬುದನ್ನು ಅದು ಜ್ಞಾಪಕಕ್ಕೆ ತರುತ್ತದೆ. ಅದು ನಮ್ಮನ್ನು ಪ್ರಾರ್ಥನೆಯಲ್ಲಿ ಪ್ರಾರ್ಥಿಸುವದಕ್ಕಿಂತ ಹೆಚ್ಚಾಗಿ "ಪ್ರಸಂಗಿಸುವದರಿಂದ" ದೂರವಿಡಬಹುದು. ಅದು ಬೇರೆ ಕಡೆಗೆ ತಿರುಗಿಸುವದನ್ನು ತೆಗೆದು ಹಾಕುತ್ತದೆ. ನಾವು ನಮ್ಮ ಮೊಣಕಾಲುಗಳ ಮೇಲಿರುವಾಗ ನಾವು ಎರಡು

ದೊಡ್ಡ ಸಾಧನಗಳನ್ನು ಉಪಯೋಗಿಸಬಹುದು: (1) ಪ್ರಾರ್ಥನೆ, ಮತ್ತು (2) ಕೈಪಾವುಡ (ಟೊವೆಲ್).

ಆಸನವು ದೇಹವನ್ನು ಒಳಗೊಂಡಿರುತ್ತದೆ. ನಿಲ್ಲಿರಿ ಮತ್ತು ಯೋಚಿಸಿರಿ. ದೇವರಿಗೆ ನಾವು ಕೊಡುವ ಕೊನೆಯ ಸಂಗತಿಯು ದೇಹವಾಗಿದೆ. ಪ್ರಾಣದ ಬಗ್ಗೆ ಆತ್ಮದ ಬಗ್ಗೆ ನಾವು ಮಾತಾಡುತ್ತೇವೆ. ನಾವು ದೇಹವನ್ನು ಕಡೆಗಣಿಸುತ್ತೇವೆ. ಅದು ಬಹಳ ಕಡಿಮೆ ಮಹತ್ವದ್ದು ಎಂದು ಯೋಚಿಸುತ್ತೇವೆ. ಆಸನವು ಅನಾನುಕೂಲತೆಗಳನ್ನುಂಟು ಮಾಡುತ್ತದೆ ಮತ್ತು ದೀನರನ್ನಾಗಿ ಮಾಡುತ್ತದೆ. "ತನ್ನ ಮೊಣಕಾಲುಗಳನ್ನು ಚಚ್ಚಲು" ಯಾರು ಬಯಸುತ್ತಾರೆ? "ಪ್ರಾರ್ಥನಾ ಕೋಣೆಯಲ್ಲಿ ಸುಮ್ಮನೇ ಕುಳಿತುಕೊಳ್ಳಲು" ಯಾರು ಬಯಸುತ್ತಾರೆ? ಯೇಸುವು ಜಯಿಸುವಂತೆ ಬಿಡಲು ದೇಹವು ಕೊನೆಯ ಕೋಟೆಯಾಗಿರಬಹುದು. ನಿನ್ನ ದೇಹಕ್ಕಾಗಿ ಹಕ್ಕು ಪತ್ರವನ್ನು ನೀನು ದೇವರಿಗೆ ಕೊಟ್ಟಿರುವಿಯೋ?

## ಸಿದ್ಧತೆ

ಬೈಬಲಿನ ಮಹಾ ವ್ಯಕ್ತಿಗಳಿಗೆ ಸಮಯಗಳು, ಸ್ಥಳಗಳು ಮತ್ತು ಪ್ರಾರ್ಥನೆಗಾಗಿ ಕಾರಣಗಳು ಇದ್ದವು ಪೌಲನಿಗೆ ಅವನ "ಮುಳ್ಳು" ಇತ್ತು. ಯೋಸುವಿಗೆ ಆತನ "ಪಾತ್ರೆ" ಇತ್ತು. ಮೋಶೆಗೆ ಅವನ ಪಾಪಭರಿತ ಜನಾಂಗವಿತ್ತು. ಪ್ರಾರ್ಥನೆಯಿಲ್ಲದ್ದರಿಂದ ಇಲ್ಲವೇ ಅರ್ಥಹೀನ ಪ್ರಾರ್ಥನೆಯಿಂದ ಸಭೆಗಳು ಚಲಿಸುತ್ತಿರುವದಿಲ್ಲ ಮತ್ತು ಸಹೋದರರು ಸತ್ತುಹೋಗಿದ್ದಾರೆ, ಪ್ರಾರ್ಥನೆಯು ಪುನಃ ಪ್ರಾರಂಭಿಸಿರಿ, ಮತ್ತು ನೀವು ಸಭೆಯನ್ನು ಪುನಃ ಆರಂಭಿಸುವಿರಿ! ನಿಮಗೆ ಹೇಳಲು ಏನೂ ಇರದಿದ್ದರೆ, ಏನನ್ನೂ ಹೇಳಬೇಡಿರಿ! ಕೇಳುವದಕ್ಕೆ ಸಮಯವಿರುವುದು, ಸುಮ್ಮನಿರುವದಕ್ಕೆ ಮೌನ ವಾಗಿರುವದಕ್ಕೆ ಸಮಯವಿರುವುದು. ಕೇಳುವದಕ್ಕಿಂತ ಮಾತನಾಡುವುದು ಸುಲಭ; ಮೌನವಾಗಿರುವದಕ್ಕಿಂತ ಮಾತನಾಡುವುದು ಸುಲಭ. ಪ್ರಾರ್ಥನೆಯ ಕಾಲವನ್ನು ಇಟ್ಟುಕೊಳ್ಳಿರಿ. ಏನೂ ಇಲ್ಲದ್ದರ ಕಡೆಗೆ ನೀವು ಗುರಿಯಿಟ್ಟರೆ, ನೀವು ಅದನ್ನು ಹೊಡೆಯುವಿರಿ. ಪ್ರಾರ್ಥನೆಯು ಒಂದು ಉದ್ದೇಶವೂ, ಒಂದು ಗುರಿಯೂ ಆಗಿರಬೇಕು. ಸ್ವಯಂ ಪ್ರೇರಿತ ಪ್ರಾರ್ಥನೆಯು ಉಲ್ಲಾಸಭರಿತವಾದದ್ದಾಗಿರಬಹುದು, ಆದರೆ ಅದು ಸ್ಥಿರವಾಗಿರುವಂಥದ್ದು ಕ್ವಚಿತ ಪರವಶತೆಗೆ ಮಿತಿಮೀರಿ ಬೆಲೆಕಟ್ಟಲಾಗಿದೆ. ಪ್ರಾರ್ಥಿಸಲು ಕಠಿಣವಾದದ್ದಾದಾಗ, ಕಠಿಣವಾದದ್ದನ್ನು ಪ್ರಾರ್ಥಿಸಿರಿ.

ಒಂದು ಯಾದಿ ಮಾಡಿರಿ. ನಾವು ಯಾಕೆ ಇದನ್ನು ಮಾಡಬಾರದು? ಪ್ರಸಂಗಗಳಿಗಾಗಿ, ಕ್ಲಾಸುಗಳಿಗಾಗಿ ಬಹಳ ಟಿಪ್ಪಣೆಗಳನ್ನು ಮಾಡಕೊಳ್ಳುತ್ತೇವೆ. ನಾವು ಅಸ್ವಸ್ಥತೆಯಲ್ಲಿ ಇರುವಾಗ, ವೈದ್ಯರಿಗೆ ಕೇಳಲು ಪ್ರಶ್ನೆಗಳನ್ನು ಬರೆದಿಟ್ಟುಕೊಳ್ಳುತ್ತೇವೆ. ಯಾವುದನ್ನು ಮರೆಯಲು ನಾವು ಬಯಸುವದಿಲ್ಲ. ದೇವರೊಂದಿಗೆ ಮಾತಾಡುವಾಗ ಒಂದು ಬರೆದ ಯಾದಿ ಇರುವುದು ಯಾಕೆ ತಪ್ಪಾಗಿದೆ? ಬಾಲಿಶ ಭಾವದ ಬೇಡಿಕೆಗಳು ಆ ಯಾದಿಯಲ್ಲಿ ಬರೆಯಲ್ಪಡುವದಿಲ್ಲ! ಒಂದು ಯಾದಿಯನ್ನು ಮಾಡಿರಿ! ಆ ಮೇಲೆ ಆ ಯಾದಿಯನ್ನು ಓದಿರಿ. ದಾವೀದನ ಕೀರ್ತನೆಗಳನ್ನು ಓದಿರಿ. ಇದು ಕೇವಲ ಯೆಹೂದಿ ಸಂಗೀತ ಪುಸ್ತಕವಾಗಿರುವದಲ್ಲದೇ, ಇದು ಯೆಹೂದೀ ಪ್ರಾರ್ಥನಾ ಪುಸ್ತಕವೂ ಆಗಿತ್ತು. ದಾವೀದನು "ತನ್ನ ಯಾದಿಯನ್ನು" ದೇವರ ಕಡೆಗೆ ತೆಗೆದುಕೊಂಡು ಹೋದನು. ಉತ್ತಮ "ಪ್ರಾರ್ಥನೆಯ ಶಾಲೆಯು" ಕೀರ್ತನೆಗಳ ಪುಸ್ತಕಗವಾಗಿದೆ. ಒಬ್ಬ ದೊಡ್ಡ ಪ್ರಸಂಗಿಗೆ ಅವನು ಅಷ್ಟು ಬಹಳವಾದದ್ದನ್ನು ಹೇಗೆ ಮಾಡಿದನೆಂದು ಕೇಳಲಾಯಿತು. "ನನ್ನ ಪ್ರಾರ್ಥನೆಯ ಯಾದಿ" ಎಂಬುದು ಅವನ ಸರಳ ಉತ್ತರವಾಗಿತ್ತು. ಅವಶ್ಯವಾದ

ಸಂಗತಿಗಳು ಆ ಯಾದಿಯ ಮೇಲೆ ಬರೆಯಲ್ಪಟ್ಟಿದ್ದವು.

ವಯಸ್ಸು ಪ್ರಾರ್ಥನೆಯನ್ನು ಸುಲಭಗೊಳಿಸುವದಿಲ್ಲ. ಇಪ್ಪತ್ಮೂರು ವರ್ಷ ವಯಸ್ಸಿನಲ್ಲಿಯಕ್ಕಿಂತ ಹೆಚ್ಚಾಗಿ ಅರವತ್ಮೂರು ವರ್ಷ ವಯಸ್ಸಿನಲ್ಲಿ ಕ್ರಿಸ್ತನಿಗಾಗಿ ಜೀವಿಸುವುದು ಸುಲಭವಾಗಿರುವದಿಲ್ಲ. ಸ್ಥಳವೂ ಸಹ ಪ್ರಾರ್ಥನೆಯನ್ನು ಸುಲಭವಾಗಿ ಮಾಡುವದಿಲ್ಲ. ಡಲ್ಲಾಸ್, ಟೆಕ್ಸಾಸದಲ್ಲಿ ನೀವು ಪ್ರಾರ್ಥಿಸದಿದ್ದರೆ, ನಾಷ್‌ವಿಲ್ಲೆ, ಟೆನೆಸ್ಸೀಯಲ್ಲಿಯೂ ಬಹುಶ ನೀವು ಪ್ರಾರ್ಥಿಸಲಾರಿರಿ. ಪ್ರಸಂಗಿಯಾಗಿರುವಂಥದ್ದೂ ಸಹ ಪ್ರಾರ್ಥನೆಯನ್ನು ಸುಲಭವಾದದ್ದನ್ನಾಗಿ ಮಾಡುವದಿಲ್ಲ! ಪ್ರಾರ್ಥಿಸಲು ಎಂದೂ ಸುಲಭವಾದ ಸಮಯವಿರುವದಿಲ್ಲ!

## ಪೌಲನು ಪ್ರಾರ್ಥನಾ ಜೀವಿತ

ಪೌಲನನ್ನು ನಾವು ಬೀದಿಯಲ್ಲಿ ಸಂದರ್ಶಿಸಿದರೆ ಅವನನ್ನು ನಾವು ಗುರುತಿಸುವದಿಲ್ಲ. ನಮಗೆ ಪೌಲನು ಸಾಧನೆಯನ್ನು, ಯಶಸ್ಸನ್ನು, ಕಾರ್ಯಗಳನ್ನು ಪ್ರತಿನಿಧೀಕರಿಸುತ್ತಾನೆ. ಪೌಲನ ಬಲವು ಪ್ರಾರ್ಥನೆಯಾಗಿತ್ತು. "ಎಡೆಬಿಡದೆ ಪ್ರಾರ್ಥಿಸಿರಿ." ಪೌಲನು ತಾನು ಪ್ರಸಂಗಿಸಿದ್ದನ್ನು ರೂಢಿಸಿದನು. ಅವನ ಪ್ರಾರ್ಥನೆಗಳು ದೇವರೊಂದಿಗಿನ ಅವನ ಸಂಬಂಧದಿಂದ ಹೆಚ್ಚಾಗಿ ತುಂಬಿಕೊಂಡಿದ್ದವು. ಪೌಲನ ಪ್ರಾರ್ಥನೆಗಳು ಸಹೋದರರೊಂದಿಗಿನ ಅವನ ಸಂಬಂಧಗಳನ್ನು ತುಂಬಿಕೊಂಡಿದ್ದವು. ಸಹೋದರರಿಗಾಗಿ ಅವನು ಪ್ರಾರ್ಥಿಸಿದನು; ತನಗಾಗಿ ಅವರ ಪ್ರಾರ್ಥನೆಗಳನ್ನು ಬಯಸಿದನು.

ನಮ್ಮ ಪ್ರಾರ್ಥನಾ ಯಾದಿಗಳು ಅವನ ಯಾದಿಗಳಂತೆ ಇರುವವೋ, ಇಲ್ಲವೇ ನಮ್ಮವುಗಳು ಹೆಚ್ಚಾಗಿ ಸಂತೆಪೇಟೆಯ ಯಾದಿಗಳಂತಿರುವವೋ? ಎಫೆಸ 3:14-21 ಹೀಗೆ ಹೇಳುತ್ತದೆ,

> ಹೀಗಿರಲಾಗಿ ಯಾವ ತಂದೆಯಿಂದ ಭೂಪರಲೋಗಳಲ್ಲಿರುವ ಪ್ರತಿ ಜನವೂ ಹೆಸರು ತೆಗೆದುಕೊಳ್ಳುತ್ತದೋ ಆ ತಂದೆಯ ಮುಂದೆ ನಾನು ಮೊಣಕಾಲೂರಿಕೊಂಡು - ನೀವು ದೇವರಾತ್ಮನ ಮೂಲಕ ಆಂತರ್ಯದಲ್ಲಿ ವಿಶೇಷ ಬಲ ಹೊಂದಿದವರಾಗುವ ಹಾಗೆಯೂ ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ; ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲು ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳಿಕೊಳ್ಳಲೂ ಪೂರ್ಣಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ.
>
> ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೆನ್.

ಈ ಪ್ರಾರ್ಥನೆಯನ್ನು ಆಳವಾಗಿ ಅಧ್ಯಯನ ಮಾಡಿರಿ. ಭಾನುವಾರ ಸಾಮಾನ್ಯವಾಗಿ ಕೇಳುವಂಥ ರೀತಿಯಲ್ಲಿ ಇದು ಕೇಳಿಸುವದಿಲ್ಲ. ಪೌಲನು ದೇವರನ್ನು ತಿಳಿಯಲಿಕ್ಕೆ

ನಿರ್ಣಾಯ ಸತ್ಯಗಳನ್ನು ಗ್ರಹಿಸುವದನ್ನು ಬಯಸಿದ್ದನು, (1) ಆಂತರಿಕವಾಗಿ ಆತ್ಮನಿಂದ ಬಲಪಡಿಸಲ್ಪಡುವದನ್ನು, (2) ನಮ್ಮ ಹೃದಯಗಳಲ್ಲಿ ನಂಬಿಕೆಯಿಂದ ಕ್ರಿಸ್ತನಿರುವದನ್ನು, (3) ಕ್ರಿಸ್ತನ ಪ್ರೀತಿಯನ್ನು ಗ್ರಹಿಸಿಕೊಳ್ಳುವದನ್ನು ಮತ್ತು (4) ದೇವರಿಂದ ತುಂಬಿಸಲ್ಪಡುವದನ್ನು ಅವನ ಕೇಳಿದನು!

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬಿಕೆ ಇಡುವದಿಲ್ಲ.***
***ನಾನು ನಿನ್ನಲ್ಲಿ ನಂಬಿಕೆಯಿಡುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

© 2009 Truth for Today